ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಕಲೇಶಪುರ ಚುನಾವಣೆಯ ಬಗ್ಗೆ ತಾವು ಒಂದು ಸ್ಟೇಟಮೆಂಟನ್ನು ಮಾಡಿಸುತ್ತೇನೆಂದು ಹೇಳಿದ್ದಿರಿ. ಮಾನ್ಯ ಅಧ್ಯಕ್ಷರೇ, ಅದಕ್ಕಾಗಿ ದಯವಿಟ್ಟು ಆ ಒಂದು ಸ್ಟೇಟ್‌ಮೆಂಟ್‌ನ್ನು ಮಾಡಿಸಿ. ಅಲ್ಲಿ ಚುನಾವಣೆ ನಿಂತು ಹೋಗಿದೆ.

ಅಧ್ಯಕ್ಷರು : ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು (ತಿದ್ದುಪಡಿ ಮತ್ತು ಮಾನ್ಯೀಕರಣ) ವಿಧೇಯಕ, 1996ನ್ನು ಮುಖ್ಯಮಂತ್ರಿಗಳ ಪರವಾಗಿ ಯಾರು ಮಾಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಇಂಟ್ರಡ್ಯೂಸ್ ಆದ ಮೇಲೆ ಚರ್ಚೆ ಪ್ರಾರಂಭವಾಗುತ್ತದೆ. ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಅದಕ್ಕಿಂತ ಮುಂಚೆ ಸ್ಟೇಟಮೆಂಟನ್ನು ಮಾಡಿಸಿದರೆ ಬಹಳ ಒಳ್ಳೆಯದು.

ಅಧ್ಯಕ್ಷರು : ಸ್ಟೇಟಮೆಂಟನ್ನು ಮಾಡುತ್ತೀರಾ?

ಶ್ರೀ ವೈಜನಾಥ್ ಪಾಟೀಲ್ : ಹೌದು. ಮಾಡುತ್ತೇನೆ.

3.50 ಪಿ.ಎಂ

ಮಂತ್ರಿಗಳ ಹೇಳಿಕೆ

ಸಕಲೇಶಪುರ ತಹಸೀಲ್ದಾರ್‌ರವರು ದಿನಾಂಕ 13.2.96ರಂದು ಪುರಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆ ನಡೆಸುತಿದ್ದ ಸಮಯದಲ್ಲಿ ಕೆಲವು ದುಷ್ಕರ್ಮಿಗಳು ನಾಮನಿರ್ದೇಶನ ಪತ್ರವನ್ನು ಅಪಹರಿಸಿರುವುದು.

+ ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೆಚ್.ಕೆ.ಡಿ.ಬಿ ಸಚಿವರು) : ಮಾನ್ಯ ಅಧ್ಯಕ್ಷರೇ, ಸಕಲೇಶಪುರ ತಹಸೀಲ್ದಾರ್ ರವರು ದಿನಾಂಕ13-02-1996ರಂದು ಪುರಸಭೆಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ನಡೆಸಲು ಸಭೆಯನ್ನು ನಿಗಧಿಪಡಿಸಿದ್ದು ಸರಿಯಷ್ಟೆ. ಆ ದಿವಸ ಕೆಲವು ದುಷ್ಕರ್ಮಿಗಳು ನಾಮ ನಿರ್ದೇಶನ ಪತ್ರ ಚುನಾವಣೆಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ಕಸಿದುಕೊಂಡು ಹೋದರು. ತಹಸೀಲ್ದಾರ್‌ರವರಿಗೆ ದಿನಾಂಕ 13-02-1996 ರಂದು ಈ ಒಂದು ಘಟನೆಯಿಂದ ಚುನಾವಣೆಯನ್ನು ನಡೆಸಲು ಸಾಧ್ಯವಾಗಿರುವುದಿಲ್ಲ. ತಹಸೀಲ್ದಾರ್ ರವರು ಆಗಿರುವ ಘಟನೆ ಬಗ್ಗೆ ಕೂಡಲೇ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಇವರಿಗೆ ಒಂದು ವರದಿಯನ್ನು ಈ ವರದಿಯ ಮೇಲೆ ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಸನ ಜಿಲ್ಲೆಯ ಪೋಲೀಸ್ ಅಧಿಕಾರಿಗೆ ಈ ಬಗ್ಗೆ ಕೂಡಲೇ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ. ಸ್ಥಳೀಯ ಪೋಲೀಸ್ ಸಿಬ್ಬಂದಿಗಳಿಂದ ಏನಾದರೂ ತಪ್ಪು ನಡೆದಿದ್ದರೆ ಅವರ ಮೇಲೂ ಸಹ ಸೂಕ್ತ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಿರುತ್ತಾರೆ. ಜಿಲ್ಲಾ ಪೋಲೀಸ್ ಅಧಿಕಾರಿಗಳು ಈಗಾಗಲೇ ಈ ಬಗ್ಗೆ ತನಿಖೆ ನಡೆಸುತ್ತಿದ್ದು ತನಿಖೆಯ ನಂತರ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು. ದಿನಾಂಕ 05-03-1996ರಂದು ಪ್ರಾಮಾಣಿಕವಾಗಿ ಚುನಾವಣೆಯನ್ನು ನಡೆಸಲು ಕ್ರಮ ಜರುಗಿಸಲಾಗಿದೆ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಯಾರು ತಪ್ಪಿತಸ್ಥರಿರುತ್ತಾರೋ ಅವರ ಮೇಲೆ ಕ್ರಮ ಜರುಗಿಸಲಾಗುವುದೆಂದು ಅವರು ಹೇಳಿದ್ದಾರೆ, ಆದರೆ ಇಲ್ಲಿ ತಪ್ಪು ಮಾಡಿರುವುದು ತಹಸೀಲ್ದಾರ್, ಏಕೆಂದರೆ ಯಾರು ಅಲ್ಲಿಗೆ ನಾಮಿನೇಷನ್ ಫೈಲ್ ಮಾಡುವುದಕ್ಕೆ ಅಲ್ಲಿಗೆ ಹೋಗಿದ್ದಾರೋ ಅವರ ನಾಮಿನೇಷನ್ ಇರತಕ್ಕಂಥದ್ದು ತಹಸೀಲ್ದಾರ್ ಹತ್ತಿರವೇ, ಆ ತಹಸೀಲ್ದಾರ್ ಮತ್ತು ಸರ್ಕಲ್ ಇನ್ಸಪೆಕ್ಟರ್ ಇಬ್ಬರೂ ಸೇರಿಕೊಂಡು, ಅಲ್ಲಿ ಒಬ್ಬನೇ ಒಬ್ಬ ಹಾಕಿದ್ದ, ಏಕೆಂದರೆ ಅಲ್ಲಿ ಕಾಂಗ್ರೆಸನವರು ಐದು ಜನ ಆರಿಸಿ ಬಂದಿದ್ದರು, ನಾಲ್ಕು ಜನ ಜನತಾದಳದವರು ಮತ್ತು 8 ಜನರು ಪಕ್ಷೇತರರು ಆರಿಸಿ ಬಂದಿದ್ದರು, ಆ ಪಕ್ಷೇತರರು ಮತ್ತು ಕಾಂಗ್ರೆಸನವರು ಒಂದಾಗಿ ನಾಮಿನೇಷನ್ ಫೈಲ್ ಮಾಡುವುದಕ್ಕೆ ಹೋಗಿದ್ದರು. ಆದ್ದರಿಂದ ಇವರು ಅವನೊಬ್ಬನೇ ಎಲೆಕ್ಟಆಗಿ ಬರುತ್ತಾನೆ ಎಂದು ತಿಳಿದುಕೊಂಡು, ಮತ್ತು ಅಲ್ಲಿರತಕ್ಕಂಥ ಒಬ್ಬ ಕಾರ್ಯಕರ್ತ, ಅದು ತಹಸೀಲ್ದಾರರ ಗಮನಕ್ಕೆ ಬಂದಿದೆ, ಸರ್ಕಲ್ ಇನ್ಸಪೆಕ್ಟರಗೂ ಕೂಡ ಗೊತ್ತು, ಆ ಫೈಲನಿಂದ ನಾಮಿನೇಷನ್ ಪತ್ರವನ್ನು ಹರಿದು ಕೊಟ್ಟಿದ್ದಾರೆ ಇವರೇ, ಯಾರು ತಹಸೀಲ್ದಾರರವರೇ ಈ ರೀತಿ ಅವರ ಗಮನಕ್ಕೆ ಬಂದರೆ ಆಕ್ಷನ್ ತೆಗೆದುಕೊಳ್ಳುತ್ತೇವೆಂದರೆ, ರಿಟರ್ನಿಂಗ್ ಆಫೀಸರ್‌ರಾದ ತಹಸೀಲ್ದಾರರೇ ಹರಿದು ಕೊಡಬೇಕಾದರೆ ಮತ್ತೆ ಯಾರ ಮೇಲೆ ಕ್ರಮ ಜರುಗಿಸುತ್ತೀರಿ ತಾವು? ಇದನ್ನು ನೇರವಾಗಿ ಹೇಳಬೇಕಾಗುತ್ತದೆ; ಇದು ಪೊಲಿಟಿಕಲಿ ಮೊಟಿವೇಟೆಡ್, ಅಂದರೆ ಯಾವ ರೀತಿಯಾಗಿ ಚುನಾವಣೆ ಅಲ್ಲಿ ನಡೆದಿದೆ ಎನ್ನತಕ್ಕದ್ದನ್ನು ತಾವು ಗಮನಿಸಬೇಕು. ಅದು ಇದು ಎಲ್ಲಿ ನಡೆದಿದೆ, ಹಾಸನ ಜಿಲ್ಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೋ, ಅವ ಜಿಲ್ಲೆಯಲ್ಲಿಯೇ ಈ ರೀತಿಯಾಗಿ ಚುನಾವಣೆ ನಡೆಯಬೇಕು ಎಂದರೆ ತಾವು ಬೇರೆ ಚುನಾವಣೆ ಯಾವ ರೀತಿಯಾಗಿ ನಡೆದಿರಬೇಕು ಎಂಬುದನ್ನು ಲೆಕ್ಕ ಹಾಕಿ.

ಶ್ರೀ ಎಸ್. ಆರ್ ಲಕ್ಷ್ಮಯ್ಯ : ಅವರು ಈಗ ಬೆಂಗಳೂರು ಜಿಲ್ಲೆಯವರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು, ಆಯಿತು.

ಅಧ್ಯಕ್ಷರು : ಅವರು ಲಕ್ಷ್ಮಯ್ಯನವರು ಎಂದು ತಮಗೆ ಗೊತ್ತಾಯಿತಲ್ಲಾ ತಮಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಬಹಳ ದಿವಸಗಳಿಂದಲೂ ಅವರು ಬೆಂಬಲಕ್ಕೆ ನಿಲ್ಲುತ್ತಿದ್ದಾರೆ, ಕೆಲವು ಜಾಗಗಳು ಖಾಲಿಯಾಗಿವೆ, ಏನಾದರೂ ಮಾಡಿ ನೋಡಿ.

ಶ್ರೀ ಎಸ್. ಆರ್. ಲಕ್ಷ್ಮಯ್ಯ : ಅಧ್ಯಕ್ಷರೇ, ನಾನು ದೇವರ ಸಾಕ್ಷಿಯಾಗಿ ನಾನು ಅಧಿಕಾರಕ್ಕೆ ಆಸೆ ಪಡುವವನಲ್ಲ.

(ಗೊಂದಲ)

ಶ್ರೀ ಎಸ್. ಆರ್. ಲಕ್ಷ್ಮಯ್ಯ : ನನ್ನ ಬೀರೂರು ಕ್ಷೇತ್ರದಲ್ಲಿ ನನ್ನ ಜಾತಿಯವರು 2000 ಇದ್ದಾರೆ, ಲಿಂಗಾಯಿತರು, ಕುರುಬರು they are dominating in my constituency. ಕೇಳಿ ಒಂದು ನಿಮಿಷ ಮಾತನಾಡುತ್ತೇನೆ. ನಾನು ಮೂರು ಬಾರಿ ಆಯ್ಕೆಯಾಗಿದ್ದೇನೆ, 1983, 1995 ರಲ್ಲಿ, 1990 ರಲ್ಲಿ ನಾನು ಏಕೆ ಸೋತೆ ಎಂದರೆ ನಮ್ಮಲ್ಲಿ ಪಾರ್ಟಿ ಇಬ್ಭಾಗವಾಯಿತು, ಅದಕ್ಕೆ ಸೋತೆ, ಕೇಳಿ ಕೇಳಿ

I have completed my third term as Municipal President in Chickmagalur. ನಮ್ಮಲ್ಲಿ ನಾನು ನೈತಿಕ ಶಕ್ತಿ ಇಟ್ಟುಕೊಂಡಿದ್ದೇನೆ. ನಾನು ಅಧಿಕಾರಕ್ಕೆ ಆಸೆ ಪಡುವ ವ್ಯಕ್ತಿಯಲ್ಲ. ದೇವೇಗೌಡರ ಸರ್ಕಾರ 4 ವರ್ಷ ಇರಬೇಕು. I don't want political power.

(ಗೊಂದಲ)

ಅಧ್ಯಕ್ಷರು : ನಾನು ನೀವು ನಮಾಜ್ ಮಾಡುತ್ತಿದ್ದೀರೇನೋ ಎಂದು ತಿಳಿದುಕೊಂಡೆ. ನೀವು ಮಸೀದಿಯನ್ನೇ ಮೈಮೇಲೆ ಕೊಡವಿಕೊಂಡರೆ ನಾನೇನು ಮಾಡಲಿ?

ಶ್ರೀ ಎಸ್. ಆರ್. ಲಕ್ಷ್ಮಯ್ಯ : ನಾನು ರಾಜಕೀಯ ಅಧಿಕಾರಕ್ಕಾಗಿ ಇಚ್ಛಿಪಡುವವನಲ್ಲ. ಯಾರನ್ನೂ ಬೆಗ್ ಮಾಡಿ ಅಧಿಕಾರ ಕೇಳುವ ವ್ಯಕ್ತಿ ನಾನಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೇಳಿದ್ದುದು ಯಾವಾಗ ಏನು ಮಾತನಾಡಬೇಕೆಂಬುದನ್ನು ನೀವು ತಿಳಿದುಕೊಂಡರೆ ಸಾಕು, ನಾನು ಮಾತನಾಡುತ್ತಿದ್ದೆ ಆಗ ತಮಗೇನಿತ್ತು ಹೇಳಬೇಕಾದಂಥ ಅವಶ್ಯಕತೆ, ರಾಮನಗರದಲ್ಲಿತ್ತು, ಇಲ್ಲಿತ್ತು ಅಂತ, ಇರಲಿ, ನಾನು ಹೇಳತಕ್ಕಂಥದ್ದು ಇಷ್ಟೆ, ಚುನಾವಣೆ ಅವರ ಜಿಲ್ಲೆಯಲ್ಲಿಯೇ ಈ ರೀತಿಯಾಗಿ ನಡೆದರೆ ಎಷ್ಟರ ಮಟ್ಟಿಗೆ ಬೇರೆ ಕಡೆ ಇಂಪಾರ್ಶಿಯಲ್ ಆಗಿ ನಡೆದಿದೆ ಎನ್ನತಕ್ಕಂಥದ್ದಕ್ಕೆ ಇದೊಂದೇ ಉದಾಹರಣೆ ಸಾಕು. ಮತ್ತೆ ಅವರ ಗಮನಕ್ಕೆ ಅಲ್ಲಿಯ ಸ್ಥಳೀಯ ಮುಖಂಡರು ತಂದಿದ್ದಾರೆ, ಅಪ್ಲಿಕೇಷನ್ ಕೊಟ್ಟಿದ್ದಾರೆ, ಟೆಲಿಗ್ರಾಂ ಕೊಟ್ಟಿದ್ದಾರೆ, ಕೊಟ್ಟರೂ ಕೂಡ ಆ ದಿವಸ ಅಥವಾ ಮರುದಿವಸ ಚುನಾವಣೆ ಮಾಡುವುದಕ್ಕೆ ಬಿಟ್ಟು ಆ ಚುನಾವಣೆ ಇನ್ನೂ ಪೋಸ್ಟಪೋನ್ಡ ಆಗಿಬಿಟ್ಟಿದೆ. ಇವೊತ್ತಿನವರೆಗೂ ಆ ಚುನಾವಣೆಯ ದಿನಾಂಕ ನಿಗಧಿ ಮಾಡಿ ಇಂಥ ದಿನಾಂಕದಂದು ನಾವು ಮಾಡುತ್ತೇವೆಂದು ಇನ್ನೂ ಹೇಳಿರುವುದಿಲ್ಲ, ಕಾರಣ ಏನು? ಇದಕ್ಕೆ ಕಾರಣಕರ್ತರು ಯಾರು? ಇಷ್ಟೊಂದು ರೀತಿಯ ಅನಾಹುತ ನಡೆಯಬೇಕಾದರೆ ಇದಕ್ಕೆ ಯಾರ ಬೆಂಬಲ ಇದೆ? ಬಹುಶಃ ಇದಕ್ಕೆ ಮುಖ್ಯಮಂತ್ರಿಗಳ ಬೆಂಬಲ ಇಲ್ಲದೇ ಹೋಗಿದ್ದರೆ ಯಾರಿಗೂ ಕೂಡ ನಾಮೀನೇಷನ್ ಪತ್ರವನ್ನು ಫೈಲನಿಂದ ಕಿತ್ತುಕೊಂಡು ಹೋಗುವ ಧೈರ್ಯವಿರುತ್ತಿರಲಿಲ್ಲ, ಒಂದು ವೇಳೆ ಕಿತ್ತುಕೊಂಡು ಹೋಗಿರುವ ಬಗ್ಗೆ ತಿಳಿದಿದ್ದರೂ ಕೂಡ ಅವರನ್ನು ಇನ್ನೂ ಏಕೆ ಅರೆಸ್ಟ್ ಮಾಡಿಲ್ಲ? ಏಕೆ ಅವರು ನಿಮಗೆ ಬೇಕಾಗಿರುವವರು ಇದ್ದಾರೆಯೇ ಅಥವಾ ನಿಮಗೆ ಬೇಕು ಅವರು ಎಂದು ಹೇಳಿ ಅವರನ್ನು ಮಾಡಲಿಲ್ಲವಾ? ಬೇಕೆ ಕಡೆ ಎಲ್ಲಾದರೂ ಸಣ್ಣಪುಟ್ಟ ಸತ್ಯಾಗ್ರಹವನ್ನು ಮಾಡಿದರೆ ಕಾನೂನು ಪ್ರಕಾರವಾಗಿ, ಆಗ ನೀವು, ಅವರನ್ನು ಒದ್ದು ಒಳಗೆ ಹಾಕಿರಿ, ನಾವು ಇದನ್ನು ಸಹಿಸುವುದಿಲ್ಲವೆಂದು ಹೇಳುತ್ತೀರಿ, ಈಗ ಆಗಿರುವುದು ಕಾನೂನಿಗೆ ವಿರುದ್ಧವಾದುದಲ್ಲವೇನು? ಅದಕ್ಕಾಗಿ ನಾನು ಕೇಳುತ್ತೇನೆ ಕಾನೂನಿನ ವಿರುದ್ಧವಾಗಿ ತಾವು ನಡೆದುಕೊಳ್ಳುತ್ತಿದ್ದೀರಿ.....

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾನ್ಯ ಮುಖ್ಯಮಂತ್ರಿಗಳು ಅವೊತ್ತು ಊರಿನಲ್ಲಿರಲಿಲ್ಲ. ಇವರು ಈಗ ಹೇಳುತ್ತಿದ್ದಾರೆ ಅವರ ಬೆಂಬಲ ಇಲ್ಲದಿದ್ದರೆ ನಾಮಿನೇಷನ್ ಪತ್ರವನ್ನು

ಫೈಲನಿಂದ ಕಿತ್ತುಕೊಂಡು ಹರಿದುಹಾಕುತ್ತಿರಲಿಲ್ಲವೆಂದು, This is a very uncharitable remark. ಸಣ್ಣ ಪುಟ್ಟಗಳಿಗೆಲ್ಲಾ ಮುಖ್ಯಮಂತ್ರಿಗಳು ಬೆಂಬಲ ಇದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. I don't like this.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ನಾನು ಕೇಳುತ್ತೇನೆ. Why you have not taken action? What made you to keep quiet? I am asking. That is your district. ಆಟ್ಲೀಸ್ಟ ಅವರ ಜಿಲ್ಲೆಯಲ್ಲೇ ನೋಡಿಕೊಳ್ಳುವುದಕ್ಕೆ ಆಗಲಿಲ್ಲವೆಂದರೆ 700 ಕೀ.ಮೀ. ದೂರದಲ್ಲಿರತಕ್ಕಂಥ ಜಿಲ್ಲೆಗಳಲ್ಲಿ ನೀವು ನೋಡುತ್ತೀರಾ? Bidar is 700-800 kms away. What is happening there? ನೀರು ನೋಡುವುದಕ್ಕಾಗುತ್ತದೆಯೇ? ನಿಮ್ಮ ಜಿಲ್ಲೆಯಲ್ಲೇ ನಡೆದಿರುವುದಕ್ಕೆ ನ್ಯಾಯ ಕೊಡುವುದಕ್ಕೆ ಆಗಲಿಲ್ಲವೆಂದರೆ ಬೇರೆ ಕಡೆ ನೀವು ಯಾವ ರೀತಿಯಾಗಿ ಮಾಡುತ್ತೀರಿ? ಅದಕ್ಕಾಗಿ.....

ಶ್ರೀ ಎಲ್.ಆರ್. ಶಿವರಾಮೇಗೌಡ : ನೇರವಾಗಿ ಭಾರ್ಜ ಮಾಡುತ್ತಿದ್ದೀರಿ?

SRI. M. MALLIKARJUNA KHARGE : I am charging straight. ನೀವು ಏನು ಮಾಡುತ್ತೀರೋ ಮಾಡಿ.

(ಗೊಂದಲ)

ತಹಸೀಲ್ದಾರ ಫೈಲನಿಂದ ಇದು ಹೋಗಿರಬೇಕಾದರೆ ನೀವು ಇದುವರೆಗೂ ಕ್ರಮ ತೆಗೆದುಕೊಂಡಿಲ್ಲವೆಂದರೆ ಇದಕ್ಕೆ ಕಾರಣ ಏನು? ಅದಕ್ಕಾಗಿ ಅವರು ನನಗೆ ಇದು ಗೊತ್ತಾಗಿಲ್ಲ, ಏನು ನಡೆದಿದೆ ಅನ್ನತಕ್ಕಂಥದ್ದು ನನಗ ತಿಳಿದಿಲ್ಲ ಎನ್ನತಕ್ಕಂಥ ಮಾತನ್ನು ಹೇಳುವುದು ಸರಿಯಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು : ನೋಡಿ ವಾಟಾಳರೇ, ನಿಮ್ಮ ಫ್ರೆಂಡ್ ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ನಾನು ಅವರ ಕ್ರಿಯಾಲೋಪಕ್ಕೆ ವಿರೋಧ ಮಾಡುತ್ತಿಲ್ಲ, ಈಗ 4 ಗಂಟೆಯಾಗಿದೆ, ಇಷ್ಟು ಹೊತ್ತಿನವರೆಗೂ ಇವರು ಶಾಸನಸಭೆಗೆ ಬಂದಿಲ್ಲ, ಇಷ್ಟು ಹೊತ್ತು ಆದಮೇಲೆ ಬಂದು ಒಂದು ಪ್ರಾಮಾಣಿಕವಾಗಿರತಕ್ಕಂಥ ಪ್ರಮುಖವಾಗಿರತಕ್ಕಂಥ ಪ್ರಶ್ನೆಯನ್ನು ತೆಗೆದುಕೊಂಡಾಗ ಮುಖ್ಯಮಂತ್ರಿಗಳ ಹೆಸರು ಬಂದತಕ್ಷಣ ಇವರು ಜಂಪ್ ಮಾಡಿದರೆ ಏನಿದು, ನನಗೆ ಇದು ಅರ್ಥವಾಗುತ್ತಿಲ್ಲ. ಇದು ಸರಿಯಾದುದಲ್ಲ, ಒಳ್ಳೆಯದಲ್ಲ ಶಿವರಾಮೇಗೌಡರೇ,

ಶ್ರೀ ಎಲ್.ಆರ್. ಶಿವರಾಮೇಗೌಡ : ಅಧ್ಯಕ್ಷರೇ ಚುಂಚನಗಿರಿಯ ಕ್ಷೇತ್ರದಲ್ಲಿ ಒಂದು ಸಭೆ ಇತ್ತು. ನಾನು ಮತ್ತು ಬೇರೆ ಮಂತ್ರಿಗಳೆಲ್ಲಾ ಅಲ್ಲಿಗೆ ಹೋಗಿ ಈಗ ತಾನೆ ಮುಗಿಸಿಕೊಂಡು ಬಂದಿದ್ದೇವೆ ನಾವು ಎಲ್ಲಿಗೂ ಬೇರೆ ಕಡೆ ಹೋಗಿರಲಿಲ್ಲ. ಸ್ವಾಮಿ, ನನ್ನದು ಇಷ್ಟೇ ಕ್ರಿಯಾಲೋಪ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನನಗೆ ಅರ್ಥವಾಯಿತು, ಇವರು ಬಂದ ಮೇಲೆ

ಮುಖ್ಯಮಂತ್ರಿಗಳಿಗೆ ತಲೆನೋವು ಜಾಸ್ತಿಯಾಗಿದ್ದು. ಅದಕ್ಕೇ ಅವರು ಹೀಗೇಳಿದ್ದು, ನನಗೆ ತಲೆನೋವಾಗಿದೆ, ಅದಕ್ಕಾಗಿ ಇವೊತ್ತು ಸದನಕ್ಕೆ ಬರುವುದಿಲ್ಲ ಎಂದು ಹೇಳಿದ್ದು, ಈಗ ಈ ವಿಷಯ ನನಗೆ ಗೊತ್ತಾಯಿತು, ನೀವು ಬಂದ ಮೇಲೆ ಅವರಿಗೆ ತಲೆನೋವು ಜಾಸ್ತಿಯಾಗಿದೆ.

ಅಧ್ಯಕ್ಷರು : ಶಿವರಾಮೇಗೌಡರನ್ನು ಎಲ್ಲರೂ ಉಪಯೋಗಿಸಿಕೊಳ್ಳುತ್ತೀರಿ, ಆಮೇಲೆ ತಲೆನೋವು ಎಂದು ಹೊರಕ್ಕೆ ಹಾಕುತ್ತೀರಿ, ಪಾಪಾ ಏಕೆ ಹೀಗೆ?

ಶ್ರೀ ಎಲ್.ಆರ್. ಶಿವರಾಮೇಗೌಡ : ಸಾಕಷ್ಟು ನನ್ನನ್ನು ಅವರು ಉಪಯೋಗಿಸಿಕೊಂಡು ಹೊರಕ್ಕೆ ನನ್ನನ್ನು ಹಾಕಿದ್ದಾರೆ. ತಾವೇ ಅದಕ್ಕೆ ತೀರ್ಪು ಕೊಡಬೇಕು. ಸಾಕಷ್ಟು ಉಪಯೋಗಿಸಿಕೊಂಡು, 5 ವರ್ಷ....

ಅಧ್ಯಕ್ಷರು : ನಿಮ್ಮ ಕ್ರಿಯಾಲೋಪ ಏನು ಹೇಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ನನ್ನ ಕ್ರಿಯಾಲೋಪ ಇಷ್ಟೆ. ಮಲ್ಲಿಕಾರ್ಜುನ ಖರ್ಗೆಯವರು ಬಹಳ ಹಿರಿಯವರಿದ್ದು ಅವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ಆದರೆ ಬೇರೆಯವರ ಮೇಲೆ ಸುಮ್ಮನೆ ಇಲ್ಲಸಲ್ಲದ ಆರೋಪವನ್ನು ಅವರು ಹೊರಿಸತಕ್ಕಂಥ ವ್ಯಕ್ತಿಯಲ್ಲ ಅವು ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಮೇಲೆ ಗಂಭೀರವಾದ ಆರೋಪವನ್ನು ಮಾಡಬೇಕಾದರೆ ಎಲ್ಲಿ ಏನು ನಡೆಯಿತು, ಮುಖ್ಯಮಂತ್ರಿಗಳು ಯಾರಿಗೆ ಫೋನ್ ಮಾಡಿದ್ದಾರೆ, ಯಾರನ್ನು ಅರೆಸ್ಟ ಮಾಡಬೇಡಿ ಎಂದಿದ್ದಾರೆ ಎನ್ನುವುದಕ್ಕೆ ಸಾಕ್ಷ್ಯಾಧಾರಗಳನ್ನು ಒದಗಿಸಿ ಮುಖ್ಯಮಂತ್ರಿಗಳ ಮೇಲೆ ಆರೋಪವನ್ನು ಮಾಡಲಿ, ಆಗ ನಾನು ಒಪ್ಪಿಕೊಳ್ಳುತ್ತೇನೆ. ಸುಮ್ಮಸುಮ್ಮನೇ ಮುಖ್ಯಮಂತ್ರಿಗಳು ಹೇಳಿದರು ಎಂದು ಆರೋಪ ಮಾಡುವುದು ಸಾಧುವಾದುದಲ್ಲ. ದಯಮಾಡಿ ನೀವು ಸಾಕ್ಷ್ಯಾಧಾರ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಇದರಲ್ಲಿ ಯಾವ ಪಾಯಿಂಟೂ ಇಲ್ಲ, ಆರ್ಡರ್ ಕೂಡ ಇಲ್ಲ, ನಮ್ಮ ತೀರ್ಮಾನ ಇಷ್ಟೆ. ಇವರೂ ಸಹ ಸದಸ್ಯರು ಎನ್ನುವುದನ್ನು ಭದ್ರ ಮಾಡುತ್ತಿದ್ದಾರಷ್ಟೆ. ಇನ್ನೇನೂ ಇಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾವು ಸಹ ಸದಸ್ಯ ಆಗಿದ್ದರೆ ಕರೆಕ್ಟ ಆಗಿ ಭದ್ರವಾಗಿಯೇ ಇರುತ್ತೇನೆ, ನನ್ನದು ಡೂಪ್ಲಿಕೇಟ್ ಅಲ್ಲ.

ಅಧ್ಯಕ್ಷರು : ಮಾನ್ಯ ಜಾಲಪ್ಪನವರು ಹೇಳಿದರು, ಮಾನ್ಯ ಮುಖ್ಯಮಂತ್ರಿಗಳು ಇಂತಹ ಸಣ್ಣ ವಿಚಾರಕ್ಕೆಲ್ಲಾ ಏಕೆ ಹೋಗುತ್ತಾರೆ ಎಂದು. ಮಾನ್ಯ ಖರ್ಗೆಯವರು ಬಹಳ ಹಿರಿಯ ರಾಜಕಾರಣಿ, ಮಂತ್ರಿಗಳಾಗಿದ್ದರು, ಅವರಿಗೆ ಸಚಿವಸಂಪುಟದಲ್ಲಿ ಇದ್ದು, ಒಳ್ಳೆಯ ಅನುಭವಿ ಇರುತ್ತಾರೆ, ಅದರ ಹಿನ್ನೆಲೆಯಿಂದ ಅವರು ಏನೋ ಒಂದು ಹೇಳುತ್ತಿದ್ದಾರೆ,ಅವರ ಮಾತನ್ನು ಸ್ವಲ್ಪ ಕೇಳಬೇಕಾಗುತ್ತದೆ. ಮಾನ್ಯ ಖರ್ಗೆಯವರೇ, ತಾವು ದಯಮಾಡಿ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ನಾಗೇಗೌಡರು ನಮ್ಮ

ಜೊತೆಯಲ್ಲಿ ಇದ್ದಿದ್ದರೆ, ನಮಗಿಂತ ಮೊದಲೇ ಮಾತನಾಡುತ್ತಿದ್ದರು. ದುರ್ದೈವದಿಂದ ಅವರು ಆ ಕಡೆ ಇದ್ದಾರೆ. ನಾನು ಹೇಳುವುದಿಷ್ಟೇ ಅನೇಕ ಸಾರಿ ಅವರೇ ನೇರವಾಗಿ ಮಾಡದೇ ಇದ್ದರೂ ಕೂಡ ಕೆಲವು ಸಲ ಏನಾಗುತ್ತದೆ ಎಂದರೆ ಕಾರ್ಯಕರ್ತರಿಗೆ ಶಕ್ತಿ ಬರುತ್ತದೆ. ಅವರು ಮಾಡುವಂತಹ ಚಟುವಟಿಕೆಗಳಿಗೆ ನಮಗೆ ಯಾರೋ ಬೆಂಬಲ ಕೊಡುವವರು ಇದ್ದಾರೆ, ಅಥವಾ ನಮಗೆ ಅಪ್ರತ್ಯಕ್ಷವಾಗಿ ಸಪೋರ್ಟ್ ಮಾಡುತ್ತಿದ್ದಾರೆ ಎನ್ನುವಂತಹ ಭಾವನೆ ಆ ಕಾರ್ಯಕರ್ತರ ಹತ್ತಿರ ಬಂದಾಗ ಇಂತಹ ಇಲ್ಲೀಗಲ್ ಚಟುವಟಿಕೆಗಳು ನಡೆಯುತ್ತದೆ. ಕಾನೂನು ಬಾಹಿರವಾದಂತಹ ಘಟನೆಗಳು ಅಲ್ಲಿ ಆಗುತ್ತವೆ, ಆದುದರಿಂದ ಅದಕ್ಕಾಗಿ ತಮ್ಮಲ್ಲಿ ಕೇಳುಕೊಳ್ಳುತ್ತೇನೆ, ಒಂದು ವೇಳೆ ಆ ಘಟನೆ ಆಗಿದ್ದರೆ, ತಹಸೀಲ್ದಾರ್ ರವರಿಗೆ ತಾವು ಏಕೆ ಎಕ್ಸಪ್ಲನೇಷನ್ ಕೇಳಲಿಲ್ಲ. ಅಥವಾ ಅಲ್ಲಿ ಇರತಕ್ಕಂಥ ಸಬ್ ಇನ್ಸಪೆಕ್ಟರ್ ಆಗಲಿ, ಸರ್ಕಲ್ ಇನ್ಸಪೆಕ್ಟರ್‌ಗಾಗಲಿ, ಅವರಿಗೆ ಈ ಅಪರಾಧಿಗಳನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲವೇ? ತಹಸೀಲ್ದಾರ್ ಅಫೀಸನವರಿಗೆ, ಅವನ ಮುಖ ಗೊತ್ತು, ಅವರು ಮಾಡಿದ್ದು ಗೊತ್ತು, ಯಾರು ಬಂದಿದ್ದರು, ಯಾರು ಕಿತ್ತುಕೊಂಡು ಹೋಗಿದ್ದಾರೆ ಎನ್ನುವುದು ನಿಮಗೆ ಗೊತ್ತಿದ್ದು ಕೂಡ, ಐಡೆಂಟಿಫೈ ಮಾಡಬೇಕು ಎಂದು ಹೇಳುವುದಾದರೆ ನೀವು ಯಾವರೀತಿಯಾಗಿ ಕಂಡುಹಿಡಿಯುತ್ತೀರಿ? ಇದನ್ನು ತಾವು ಸ್ಪಷ್ಟಪಡಿಸಿ. ಅದಕ್ಕಾಗಿ ನಾನು ಅಲಿಗೇಷನ್ ಮಾಡುತ್ತಿದ್ದೇನೆ ಎಂದು ತಾವು ತಿಳಿದುಕೊಳ್ಳಬೇಕಾಗಿಲ್ಲ. ಆದರೆ ಇದು ನಡೆದಂತಹ ಘಟನೆಗೆ ಇಲ್ಲಿಯವರೆಗೆ ಕೂಡ ಯಾವುದೇ ಕ್ರಮವನ್ನು ತಾವು ತೆಗೆದುಕೊಳ್ಳದೆ, ಮೊನ್ನೆ ಸದಸ್ಯರಾದ ಮಾನ್ಯ ಶಿವರಾಂರವರು ಇದರ ಬಗ್ಗೆ ಗಮನ ಸೆಳೆಯುವ ಸೂಚನೆ ಹಾಕಿದಮೇಲೆ, ವಿಧಾನ ಸಭೆ ಪ್ರಾರಂಭವಾಗುತ್ತದೆ ಎಂದು ಗೊತ್ತಾದಮೇಲೆ ಈಗ ಅಲ್ಲಿ ಇದರ ಬಗ್ಗೆ ಯೋಚನೆ ಪ್ರಾರಂಭವಾಗುತ್ತದೆ ಏಕೆ? ಇಲ್ಲಿ ಕಾಲಿಂಗ್ ಅಟೆನಷನ್ ಹಾಕಬೇಕು, ಆ ವಿಚಾರ ಸದನದಲ್ಲಿ ಬರಬೇಕು, ಈ ವಿಷಯ ಎತ್ತಿದ ಮೇಲೆ. ಮಾಡಬೇಕು ಎಂದು ಇದೆಯೇ? ಕಾನೂನು ಪ್ರಕಾರ ನೇರವಾಗಿ ಮಾಡುವುದಕ್ಕೆ ಆಗುವುದಿಲ್ಲವೇ? ಪ್ರತಿಯೊಂದಕ್ಕೂ ಕೂಡನ ಸದನದಲ್ಲಿ ಕೇಳುವುದಕ್ಕೆ ಸಾಧ್ಯವಾಗುತ್ತದೆಯೇ? ಆದುದರಿಂದ ದಯವಿಟ್ಟು ಎಲ್ಲೋ ಒಂದು ಕಡೆ ಲೋಪವಾಗುತ್ತದೆ, ಅದನ್ನು ಸರಿಪಡಿಸಿ. ಮತ್ತು ಇದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ, ಅವರು ತಹಸೀಲ್ದಾರ್ ಇರಲಿ, ಸರ್ಕಲ್ ಇನ್ಸಪೆಕ್ಟರ್ ಇರಲಿ, ಯಾರೇ ಇರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಕೆಲಸ ಆಗಬೇಕು. ಮತ್ತು ತಪ್ಪಿತಸ್ಥರನ್ನು ತಕ್ಷಣ ಸಸ್ಪೆಂಡ್ ಮಾಡಬೇಕು. ಏಕೆಂದರೆ ಕನಿಷ್ಠಪಕ್ಷ ನಾಳೆಯಾದರೂ ಸಹ ಇಂತಹ ಕೆಲಸಕ್ಕೆ ಕೈಹಾಕದ ರೀತಿಯಲ್ಲಿ ನೋಡಿಕೊಳ್ಳಬೇಕು.

ಅಧ್ಯಕ್ಷರು : ಸಮಯ ಬಹಳ ಕಡಿಮೆಯಿದೆ, ಸದನವನ್ನು 5.00 ಗಂಟೆಗೆ ಮುಕ್ತಾಯ ಗೊಳಿಸಬೇಕು, ಆದುದರಿಂದ ದಯವಿಟ್ಟು ಬೇಗ ಮುಗಿಸಿ.

+ ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಅಧ್ಯಕ್ಷರೇ, ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ವಿಚಾರ. ನಿನ್ನೆ ಮಾನ್ಯ ಶಿವರಾಂರವವು ಈ ವಿಚಾರವಾಗಿ ಮಾತನಾಡುವಾಗ ನಾನು ಈ ಸದನದಲ್ಲಿ ಇರಲಿಲ್ಲ. ನಾನು ಈ ವಿಚಾರವನ್ನು ಸದನದಲ್ಲಿ ಬೇರೆ ರೂಪದಲ್ಲಿ ಪ್ರಸ್ತಾಪ ಮಾಡಬೇಕು ಎಂದು ಪ್ರಯತ್ನ ಮಾಡುತ್ತಿದ್ದೆ, ಆದರೆ ನನಗೆ ಅವಕಾಶವಾಗುತ್ತಿಲ್ಲ. ತಮ್ಮ ಹತ್ತಿರ ನಾನು 2-3 ಬಾರಿ ಬಂದೆ. ತಮ್ಮ ಜೊತೆ ಯಾರ ಇದ್ದರು. ಆದುದುರಿಂದ ನಾನು ಒಳಗೆ ಬರುವುದಕ್ಕಾಗಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ತಾವು ದಯವಿಟ್ಟು ಯಿಲ್ಡ್ ಆಗಿ, ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಮಗ ಸನ್ಮಾನ್ಯ ಹೆಚ್.ಡಿ. ರೇವಣ್ಣನವರಿಗೆ ಇವರು ರೆಫರ್ ಮಾಡುತ್ತಿರತಕ್ಕಂಥಾದ್ದು. ರೇವಣ್ಣನವರು ಈ ಸದನದ ಗೌರವಾನ್ವಿತ ಸದಸ್ಯರು. ಅವರ ಬಗ್ಗೆ ಏನಾದರೂ ನೇರವಾಗಿ ಚಾರ್ಜಸ್ ಇದ್ದರೆ ತಮಗೆ ಬರೆದು ಕೊಡಲಿ so that he can reply.ನಾಳೆ ದಿನ ಪತ್ರಿಕೆಯಲ್ಲಿ ಬರುತ್ತದೆ. ಗುಮ್ಮ, ಗುಮ್ಮ ಹಾಸನ ಜಿಲ್ಲೆಯ ಗುಮ್ಮ ರೇವಣ್ಣ ಎಂದು. ಅದಕ್ಕೆ ಅವರು ಡಿಫಂಡ್ ಮಾಡಿಕೊಳ್ಳುವುದಕ್ಕೆ ಮತ್ತೊಂದು ಸಾರಿ ಎದ್ದು ನಿಂತು ಕ್ಲಾರಿಫೀಕೇಷನ್ ಕೊಡುವಂತಹ ಕೆಲಸ ಮಾಡಬೇಕಾಗುತ್ತದೆ. ಸಕಲೇಶಪುರದಲ್ಲಿ ಚುನಾವಣೆ ಅಕ್ರಮವಾಗಿ ನಡೆಯಿತು ಎಂದರೆ ನೀವು ಹೇಳಿ. ಅದರ ಬಗ್ಗೆ ನಾವು ಕಾನೂನಿನ ಪ್ರಕಾರವಾಗಿ, ಮುನಿಸಿಪಾಟಲಿ ಆಕ್ಟ ಪ್ರಕಾರವಾಗಿ, ಪೋಲೀಸ್ ಆಕ್ಟ, ಪ್ರಕಾರವಾಗಿ ಅಕ್ರಮವಾಗಿ ಏನಾದರೂ ನಡೆದಿದ್ದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ನೀವು ಏನು ಇಲ್ಲದೆ ಇದುವರೆಗೆ ಗುಮ್ಮ..

ಶ್ರೀ ಬಿ.ಬಿ. ಶಿವಪ್ಪ : ತಾವು ತಪ್ಪುದಾರಿಗೆ ಎಳೆಯುತ್ತಿದ್ದೀರಿ. ನಾನು ರೇವಣ್ಣ ಗುಮ್ಮ ಎಂದು ಹೇಳಲಿಲ್ಲ. ಆ ರೀತಿ ಹೆದರಿಸುತ್ತಿದ್ದಾರೆ, ಇದು ನಾನು ಹೇಳತಕ್ಕಂಥಾದ್ದು ಅಲ್ಲ. ದಯವಿಟ್ಟು ಅದನ್ನು ಸರಿಪಡಿಸುವುದಕ್ಕೆ ಪಯತ್ನ ಮಾಡಿ. ನಾನು ರೇವಣ್ಣನವರ ಮೇಲೆ ಹೇಳಲಿಲ್ಲ. ಜನ ಈ ರೀತಿ ಹೆದರಿಸುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನೇನೂ ಹೆಸರು ತೆಗೆದುಕೊಳ್ಳುವುದಿಲ್ಲ. ಯಾರದೋ ಹೆಸರನ್ನು ತೆಗೆದುಕೊಂಡು ಇವರು ಇಂತಹವರ ಪಕ್ಕದಲ್ಲಿ ಇದ್ದಾರೆ ಎಂದು ಹೇಳಿದರೆ ಅದರ ಅರ್ಥ ಏನಾಗುತ್ತದೆ ? That cannot go on record.ಯಾರೋ ಬೀದಿಯಲ್ಲಿ ಹೋಗತಕ್ಕಂತಹ ಮಾತನ್ನು ಕೇಳಿ ಗೌರವಾನ್ವಿತ ಸದಸ್ಯರು ಈ ರೀತಿಯಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಏನಾದರೂ ಸಾಕ್ಷಿ ಆಧಾರ ಪುರಾವೆಗಳನ್ನು ನಾವು ಇಡಬೇಕಾಗುತ್ತದೆ.

ಅಧ್ಯಕ್ಷರು : ಈಗ ಮಾತನಾಡುತ್ತಾ ಎಲ್ಲಿಂದ ಎಲ್ಲಿಗೋ ಹೋದಿರಿ.

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಗೃಹಮಂತ್ರಿಗಳು ಸದನವನ್ನು ದಾರಿ ತಪ್ಪಿಸುವಂತಹ ಪ್ರಯತ್ನ ಮಾಡಿದರು. ರೇವಣ್ಣನವರು ಹೆಸರನ್ನು ನಾನು ಹೇಳಲಿಲ್ಲ.

ಶ್ರೀ ವೈಜನಾಥ್ ಪಾಟೀಲ್ : ಈಗಾಗಲೇ ಕೋರ್ಟಗೆ ಕೇಸ್ ಹಾಕಿದ್ದಾರೆ. ಮತ್ತು ಚುನಾವಣೆ ಕೂಡ ಬರುವ 5ನೇ ತಾರೀಖು ನಡೆಯುತ್ತಿದೆ. ಬೇಕಾದರೆ ಅವತ್ತು ಅವರಿಗೆ ನೀವು ನಾಮಿನೇಷನ್ ಹಾಕಿ ಮತ್ತೇ ಆರಿಸಿ ತರಬಹುದು. ಕೆಲವು ಅನಸೋಷಿಯಲ್ ಎಲಿಮೆಂಟ್ಸ ಒಂದು ಏನು ಈ ಕೆಲಸ ಮಾಡಿದ್ದಾರೋ.

(ಗೊಂದಲ)

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, 10ನೇ ತಾರೀಖು ಹಾಕಿರತಕ್ಕಂಥ ನಾಮಿನೇಷನ್ ಅನ್ನು ಕಿತ್ತುಕೊಂಡು ಹೋದರು. ಪೋಲೀಸ್ ಎಫ್.ಐ.ಆರ್.ನಲ್ಲಿದೆ. ಹುಡುಕಿ ಕೀಳಬೇಕು ತಾನೇ ?

ನಾಮಿನೇಷನ್ ಪೇಪರನಲ್ಲಿ ಕಿತ್ತುಕೊಂಡು ಹೋದರು ಎಂದರೆ ಹೇಗೆ ಮೂಲೆ ಮಾತ್ರ ಹೋಗುತ್ತದೆ ಆದರೆ ಅದನ್ನು ಹರಿದುಕೊಟ್ಟಿದ್ದಾರೆ. 10ನೇ ತಾರೀಖಿನಲ್ಲಿ ಕೊಟ್ಟ ನಾಮಿನೇಷನ್ ಪೇಪರ್ ಅನ್ನು ಕಟ್ ಮಾಡಿ ಕೊಡಬೇಕಾದರೆ ಕಟ್ ಮಾಡಿ ತೆಗೆದುಕೊಳ್ಳುವರೆಗೂ ಅವರ ಮುಖ ಪರಿಚಯ ಆಗಲಿಲ್ಲವೇನು ಅವರಿಗೆ? ಯಾರು ಎಂದು ನನಗೆ ಪರಿಚಯ ಇಲ್ಲ ಎಂದು ತಹಸೀಲ್ದಾರ್ ಹೇಳುವುದಾದರೆ ಇದು ಉದ್ದೇಶ ಇದೆ. ಮತ್ತು ಸಕಲೇಶಪುರ ತಾಲ್ಲೂಕು ಆಫೀಸ್ ಹಾಗೂ ಸಕಲೇಶಪುರ ಪೋಲೀಸ್ ಸ್ಟೇಷನ್ ಒಟ್ಟಿಗೆ ಇರತಕ್ಕಂಥಾದ್ದು. ತಾಲ್ಲೂಕು ಆಫೀಸ್ ಆಚೆಗೆ ದಾಟಿದರೆ ಒಂದು ಕಡೆ ಪೋಲೀಸ್ ಸ್ಟೇಷನ್ ಒಂದು ಕಡೆ ಸರ್ಕಲ್ ಇನ್ಸಪೆಕ್ಟರ್ ರವರ ಆಫೀಸ್. ಇದು ಮಾನ್ಯ ಗೃಹ ಮಂತ್ರಿಗಳಿಗೆ ಗೊತ್ತಿರತಕ್ಕಂತ ವಿಷಯ. ಓಡಿ ಹೋಗತಕ್ಕಂಥ ಸಮಯ 11.30 ಗಂಟೆಗೆ ಇವರು ಹೇಳಿರತಕ್ಕಂಥ ರೀತಿಯಲ್ಲಿ 4 ಜನ ಓಡಿ ಹೋಗುವವರನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲವೇ? ಹಾಗಾದರೆ ಇದು ಯಾರು ಮಾಡಿರುವುದು? ಬಹಿರಂಗವಾಗಿ ನಡೆದಿರುವ ಕೃತ್ಯ ಇದು.

ಶ್ರೀ ಎಲ್.ಆರ್. ಶಿವರಾಮೇಗೌಡ : ನಿಮ್ಮ ಕಡೆಯವರೇ ಕೂಗಿರಬಹುದು..

(ಗೊಂದಲ)

ಶ್ರೀ ಬಿ.ಬಿ. ಶಿವಪ್ಪ : ಅಧ್ಯಕ್ಷರೇ, ಮಾನ್ಯ ಶಿವರಾಮೇಗೌಡರು ಜೈ ಎಂದು ಕೂಗುವವರು. ತಹಶೀಲ್ದಾರರೇ 15 ಹೆಸರು ಕೊಟ್ಟಿದ್ದಾರೆ.. ಇನ್ನೂ ಬೇರೆಯವರು ಜೈ ಎಂದು ಹೇಳಲಿಕ್ಕೆ ಬರುವುದಿಲ್ಲ. ಇರುವುದೇ ಅವರು.

ಶ್ರೀ ಬಿ. ಶಿವರಾಂ : ನಾನು ಹೇಳಿದ್ದೇನೆಂದರೆ, 13ನೇ ತಾರೀಖು ಈ ಚುನಾವಣೆ ಇದೆಯೆಂದು ಪೋಲೀಸ್ ಅಧೀಕ್ಷಕರಿಗೆ 9-2-96ಕ್ಕೆ ಕಾಗದ ಬರೆದೆ. ಇದಕ್ಕೆ ತಾವು ರಕ್ಷಣೆಯನ್ನು ಒದಗಿಸಬೇಕೂಂತ ಜೊತೆಗೆ ಜಿಲ್ಲಾಧಿಕಾರಿಗಳಿಗೆ ಕಾಪಿ ಕೊಟ್ಟಿದ್ದೇವೆ, ದಿವೈಎಸಪಿ ಮತ್ತು ಸಕಲೇಶಪುರದ ಸರ್ಕಲ್ ಇನ್ಸಪೆಕ್ಟರಗೂ ಕಾಪಿ ಕೊಟ್ಟಿದ್ದೇವೆ. ಹೀಗೆ ಎಚ್ಚರಿಸಿದರೂ ಅವರು ಏಕೆ ಗಮನ ತೆಗೆದುಕೊಳ್ಳಲಿಲ್ಲ? ಅಧ್ಯಕ್ಷರೇ, ತಾವು ದಯವಿಟ್ಟು ಕೊಟ್ಟ ಕಂಪ್ಲೇಂಟ್ ಎಫಐಆರ್‌ನಲ್ಲಿ ಕ್ಲಿಯರ್ ಆಗಿದೆ. ಇಂಥಿಂಥವರು ಅಂತ, ಅವರ ಜೊತೆ 20 ಜನ ಬಂದರು ಅಂತ, ಹೊರಗಡೆಯಿಂದ ಯಾರೂ ಬರಲಿಲ್ಲ. ಆಮೇಲೆ ತೆಗೆದುಕೊಂಡು ಹೋದರು, ಗೊತ್ತಿಲ್ಲ ಎಂದು ಹೇಳುತ್ತಾರೆ. ಇನ್ನೊಂದು ಸಚಿವರು ಉತ್ತರ ಕೊಟ್ಟರು ಈಗ ಕ್ರಮ ತೆಗೆದುಕೊಳ್ಳಲು ಹೇಳಿದ್ದೇವೆ ಅಂತ. ಅವತ್ತು 28ನೇ ತಾರೀಖು, ನಾಮಪತ್ರ ಹರಿದು ಕೊಂಡು ಹೋಗಿರುವುದು 13ನೇ ತಾರೀಖು, ಇಲ್ಲಿಯವರೆಗೂ ಕ್ರಮ ತೆಗೆದುಕೊಂಡು ಅಪರಾಧಿಗಳು ಯಾರು ಅಂತ ಗುರುತಿಸವಷ್ಟು ಸೌಜನ್ಯವೂ ಪೋಲೀಸ್ ಇಲಾಖೆ ತೋರಿಸಲಿಲ್ಲ ಅಂದರೆ ಪೋಲೀಸ್ ಎಷ್ಟು ನಿಷ್ಕ್ರಿಯವಾಗಿದೆ ಜಿಲ್ಲೆಯಲ್ಲಿ ಎಂಬುದನ್ನು ಯೋಚಿಸಿ ಅಧ್ಯಕ್ಷರೇ. ಮುಖ್ಯಮಂತ್ರಿಗಳ ಅವತ್ತು ಗೂಂಡಾಗಿರಿಯನ್ನು ಈ ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲವೆಂದು ಹೇಳಿದರು. ಆದರೆ ನಾಮಪತ್ರವನ್ನು ಹೊತ್ತುಕೊಂಡುಹೋಗುವವರ ವಿರುದ್ಧ ಇದುವರೆಗೂ ಕ್ರಮ ತೆಗೆದುಕೊಳ್ಳದೇ ಇರುವಾಗ ಇದಕ್ಕಿಂತ ಗೂಂಡಾಯಿಸಂ ಇನ್ನೇನು ನಡೆಯುತ್ತದೆ ಅಧ್ಯಕ್ಷರೇ?

ಶ್ರೀ ವೈಜನಾಥ ಪಾಟೀಲ್ : ಈಗಾಗಲೇ ಕೇಸ್ ಕೋರ್ಟಿನಲ್ಲಿ ಹಾಕಲಾಗಿದೆ. law will take its own course. ಏನೂ ಕ್ರಮ ತೆಗೆದುಕೊಂಡಿಲ್ಲ ಎಂದು ಏಕೆ ಹೇಳುತ್ತಿದ್ದೀರಿ?

ಶ್ರೀ ಸಿ.ಎಸ್. ಪುಟ್ಟೇಗೌಡ : ಸ್ವಾಮಿ, ಇವತ್ತು ಇವರು ಹೇಳುತ್ತಿದ್ದಾರೆ ಸಕಲೇಶಪುರದ ಒಂದು ಚುನಾವಣೆ ನಿಂತಿದ್ದೆ ಅಂತ.

ಅಧ್ಯಕ್ಷರು : ಕುಳಿತುಕೊಳ್ಳಿ ಪುಟ್ಟೇಗೌಡರೇ.

ಶ್ರೀ ಸಿ.ಎಸ್. ಪುಟ್ಟೇಗೌಡ : ಹಿಂದೆಯಲ್ಲಾ ಹಾಸನದಲ್ಲಿ ಶಿವರಾಂ ಅವರ ಕ್ಷೇತ್ರದಲ್ಲಿ ಎಷ್ಟು ಸಲ ಎಲೆಕ್ಷನ್ ನಿಂತಿದೆ ಎಂಬುದನ್ನು ದಯಮಾಡಿ ಕೇಳಿ. ಗೊತ್ತಾಗುತ್ತದೆ.

ಶ್ರೀ ಬಿ. ಶಿವರಾಂ : ಒಂದು ಚುನಾವಣೆ ನಿಂತಿದ್ದನ್ನು ಸಾಬೀತು ಮಾಡಿ ನೋಡೋಣ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ : ನಾನು ಇಲ್ಲಿ ಮುಖ್ಯಮಂತ್ರಿಗಳ ಪರ ಮಾತಾಡುತ್ತಿಲ್ಲ. ಯಾರೋ ತಪ್ಪು ಮಾಡಿದರೆ ಮುಖ್ಯಮಂತ್ರಿಗಳ ಹೆಸರು ಇಲ್ಲಿ ಏಕೆ ತೆಗೆದುಕೊಳ್ಳಬೇಕು?

ಅಧ್ಯಕ್ಷರು : ಕುಳಿತುಕೊಳ್ಳಿ, ಖಿರ್ಗಿಯವರೇ ಈ ವಿಚಾರ ನಿನ್ನೆ ಪ್ರಸ್ತಾಪ ಮಾಡಿದ್ದಿರಿ, ಅದಕ್ಕೆ ಉತ್ತರ ಸಿಕ್ಕಿದೆ. This matter was raised yesterday. ಸೂಕ್ಷ್ಮವಾಗಿ ಏನಾದರೂ ವಿವರಣೆ ಕೇಳುವುದು ಬಿಟ್ಟು ಅದನ್ನೇ ಚರ್ಚೆಗೆತ್ತಿಗೊಂಡರೆ ಅಜೆಂಡಾ ನಾನೇನು ಮಾಡಲಿ? ಎಲ್ಲಾ ಎದ್ದುನಿಂತು ಮಾತನಾಡುತ್ತಾಹೋದರೆ it will become a general debate.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ : ನಿಮ್ಮ ಮನಸ್ಸಿಗೆ ನೋವಾಗಿರಬಹುದು, ನಮ್ಮದೇನು ಹೇಳಬೇಕೋ ಹೇಳುತ್ತಿದ್ದೇವೆ.

ಅಧ್ಯಕ್ಷರು : ನಾರ್ಮಲಿ ನಾನು ಈ ಸದನದಲ್ಲಿ ಬೆಲೆ ಉಪಯೋಗಿಸುವುದಿಲ್ಲ, ಸದನದಲ್ಲಿ ಎದ್ದು ನಿಂತುಕೊಳ್ಳುವುದಿಲ್ಲ. We should cultivate the habit of conducting the proceedings without all these things. ನಾನೀಗ ತಮ್ಮಲ್ಲಿ ಇಷ್ಟೇ ವಿನಂತಿಮಾಡಿಕೊಳ್ಳುತ್ತೇನೆ. ಸರ್ಕಾರ ಏನು ಉತ್ತರ ಕೊಟ್ಟಿದೆ, ಅದರ ವಿಚಾರದಲ್ಲಿ ನೀವೇನು ಪ್ರಸ್ತಾಪ ಮಾಡಬೇಕಾಗಿತ್ತು ಮಾಡಿದ್ದೀರಿ let us close this matter. and proceed further. ಹೇಳಿ ವೈಜನಾಥರವರೇ, ಈಗ ಅವರು ಹೇಳಿದ ಆಕ್ಷೇಪಣೆಯಲ್ಲಾ ನಿಮಗೆ ಗೊತ್ತಾಯಿತಲ್ಲಾ The total summary of their expressions ಏನು ಎಂಬುದು ನಿಮಗೆ ಗೊತ್ತಾಯಿತೇ? ಅವರ ಒಟ್ಟು ಮಾತಿನ ಅಭಿಪ್ರಾಯ ಇದರಲ್ಲಿ ನಿಮ್ಮ ಸರ್ಕಾರಿ ಅಧಿಕಾರಿಗಳು ಶಾಮೀಲಾಗಿ ಮಾಡಿದ್ದಾರೆ. ಇದು ಮುಖ್ಯಮಂತ್ರಿಗಳ ಸ್ವಂತ ಜಿಲ್ಲೆ. ಅವರ ಹೆಸರು ಹೇಳಿಕೊಂಡು ಅವರ ವರ್ಚಸ್ ಉಪಯೋಗಿಸಿಕೊಂಡು ಕೆಲವರು ಅಧಿಕಾರದ ದುರುಪಯೋಗ ಮಾಡಿ ಕಾನೂನನ್ನು ಕೈಗೆ ತೆಗೆದುಕೊಂಡಿದ್ದಾರೆಂದು. ಇದಕ್ಕೇನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಿ.

ಶ್ರೀ ವೈಜನಾಥ ಪಾಟೀಲ್ : ಅಧ್ಯಕ್ಷರೇ ಅದರ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಪೋಲಿಸರು ಕೇಸ್ ರಿಜಿಸ್ಟರ್ ಮಾಡಿದ್ದಾರೆ, ಯಾರ್ಯಾರು ಅವತ್ತು ತಹಸೀಲ್ದಾರ್ ಆಫೀಸಲ್ಲಿ ಗದ್ದಲ ಮಾಡಿದ್ದಾರೋ ಅವರ ವಿರುದ್ಧ ಕ್ರಿಮಿನಲ್ ಕೇಸ್ ರಿಜಿಸ್ಟರ್ ಆಗಿದೆ. ಅದರ ಕಾಪಿ ಇಲ್ಲಿದೆ.

ಅಧ್ಯಕ್ಷರು : ಕಂಪ್ಲೆನೆಂಟ್ ಯಾರು?

ಶ್ರೀ ವೈಜನಾಥ್ ಪಾಟೀಲ್ : ತಹಸೀಲ್ದಾರ್

ಶ್ರೀ ವಾಟಾಳ್ ನಾಗರಾಜ್ : ತಹಸೀಲ್ದಾರೇ ತಪ್ಪಿತಸ್ಥನಾಗಿರುವಾಗ ಅವನಿಂದಲೇ ಫಿರ್ಯಾದು ತೆಗೆದುಕೊಂಡು ಅವರ ವಿರುದ್ಧ ಮಾಡುವುದು ಚೆನ್ನಾಗಿದೆ ಇದು.

(ಗೊಂದಲ)

ಅಧ್ಯಕ್ಷರು : ರಿಟರ್ನಿಂಗ್ ಆಫೀಸರಾಗಿದ್ದ ತಹಸೀಲ್ದಾರರು, ಅವರ ಹತ್ತಿರ ನಾಮಪತ್ರ ಕಸಿದುಕೊಂಡು ಹೋಗಿದ್ದಾರೆ ಅಂತ ಫಿರ್ಯಾದು ಕೊಟ್ಟಿರುವುದು, ಕೇಸ್ ರಿಜಿಸ್ಟರಾಗಿದೆ. That is a criminal offence. ಅದು ಒಂದು ಕಡೆಗಿರಲಿ. ಅವರೇನು ಹೇಳ್ತಾರೆ ತಹಶೀಲ್ದಾರರೇ ಶಾಮೀಲಾಗಿರುತ್ತಾರೆ ಅಂತ. ದಯಮಾಡಿ ಸರ್ಕಾರದ ವತಿಯಿಂದ you have this particular aspect enquired into immediately That is what is required. They are expressing doubts about the conduct of the returning officer. This could be a fictitious complaint. ಅನ್ನುವ ಭಾವನೆ ಅವರು ವ್ಯಕ್ತಪಡಿಸುವುದರಿಂದ, have this aspect enquired into.

ಶ್ರೀ ವೈಜನಾಥ್ ಪಾಟೀಲ್ : ತಹಶೀಲ್ದಾರೇ ತಪ್ಪಿತಸ್ಥರೆಂದು ಕಂಡುಬಂದರೆ ಜಿಲ್ಲಾಧಿಕಾರಿಗಳ ಕೈಯಿಂದ ತನಿಖೆ ಮಾಡಿಸುತ್ತೇವೆ.

ಶ್ರೀ ಬಿ.ಬಿ. ಶಿವಪ್ಪ : 5ನೇ ತಾರೀಖು ಅವರೇ ಚುನಾವಣಾಧಿಕಾರಿ ಆಗುತ್ತಾರಾ?

MR SPEAKER : You lodge a complaint. We will ask them to change the returning officer. Heaven's won't fall. If they have doubts about the impartiality of the conduct of the returning officer, the Government should not have any difficulty to change the returning officer.

ಶ್ರೀ ಬಿ.ಬಿ. ಶಿವಪ್ಪ : ಏನಕ್ವೊರಿ ಇಬ್ಬರ ಮೇಲೂ ಆಗಬೇಕು. ಅಧ್ಯಕ್ಷರು : ಇಬ್ಬರು ಅಲ್ಲದೆ ಹೋದರೆ 20 ಜನರ ಮೇಲೆ ಹೇಳಿ. ಮಾಡುತ್ತಾರೆ. ಏನು ಬೇರೆ ಕೆಲಸ ಇದೆ ಅದಕ್ಕೆ ಆಗಲಿ.

4.20 ಪಿ.ಎಂ.

ಈಗ ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು (ತಿದ್ದುಪಡಿ ಮತ್ತು ಮಾನ್ಯೀಕರಣ) ವಿಧೇಯಕ 1996; ಮಾನ್ಯ ಮುಖ್ಯಮಂತ್ರಿಯವರ ಪರವಾಗಿ.